ವೇಜಸ್ ನಿಗಧಿ ಮಾಡಿದ್ದಾರೆ. ಈ ಬಗ್ಗೆ ಒಂದು ಅಗ್ರಿಮೆಂಟ್ ಆಲ್ಲಿ ಆಗಿದೆ. ಆದರ ಪ್ರಕಾರ ಅವರು ಮಿನಿಮಮ್ ವೇಜಸ್‌ಗಿಂತ ಜಾಸ್ತಿ ಕೊಡುತ್ತಿದ್ದಾರೆ. ಇಲ್ಲಿಯೂ ಸಹ ಬೀಡಿ ಮಾಲೀಕರು ದಿನಗೂಲಿಯನ್ನು ೧೦ ರೂ.ಗಳ ಪ್ರಕಾರ ಕೊಟ್ಟರೆ ನಾವು ಬೇಡ ಎಂದು ಹೇಳುವುದಿಲ್ಲ. ಈಗ ಈ ಉದ್ಯಮ ಪಕ್ಕದ ತಮಿಳುನಾಡು ಮತ್ತು ಆಂಧ್ರ ರಾಜ್ಯಗಳಿಗೆ ಹೋಗಬಾರದೆಂಬ ಕಾರಣದಿಂದ ಇಲ್ಲಿ ಅಲ್ಲಿಗಿಂತಲೂ ಹೆಚ್ಚು ನಿಗಧಿ ಮಾಡಿದ್ದೇವೆ. ಇದನ್ನು ಮತ್ತೆ ಪುನರ್ವಿಮರ್ಶೆ ಮಾಡುತ್ತಿದ್ದೇವೆ. ಆ ಸಮಯದಲ್ಲಿ ತಾವು ಹೇಳಿದ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇರಳಾದಲ್ಲಿ ೧೯೬೯ ರಿಂದ ಕೊಡುತ್ತಿರುವುದನ್ನು ಇಲ್ಲಿ ೧೯೮೨ ರಲ್ಲಿಯೂ ಸಹ ಕೊಡಲು ಹಿಂದೆ ಮುಂದೆ ನೋಡಲು ಕಾರಣವೇನು ? ಕಾರ್ಮಿಕರ ಹಿತವನ್ನು ತಾವು ಯಾವ ರೀತಿ ಕಾಯುತ್ತಿದ್ದೀರೆಂಬುದು ಇದರಿಂದಲೇ ತಿಳಿಯುತ್ತದೆ ;

ಶ್ರೀ ಎ. ಬಿ. ಜಕನೂರ್.—೧೯೬೯ರಲ್ಲಿ ಅವರು ಒಂದು ಸಾವಿರ ಬೀಡಿ ಕಟ್ಟಲು ೩ ರೂ.ಗಳನ್ನು ಕೊಡಬೇಕೆಂದು ನಿಗಧಿ ಮಾಡಿದ್ದಾರೆ. ಆ ರೇ ಇದರ ಜೊತೆಗೆ ಡಿ.ಎ. ಸಹ ಸೇರಿರುವುದರಿಂದ ಒಂದು ಸಾವಿರ ಬೀಡಿಗಳಿಗೆ ೯–೬೦ ರೂ.ಗಳಾಗುತ್ತದೆ. ಪೈಸ್–ಇಂಡೆಕ್ಸ್ ೫೩ ಪಾಯಿಂಟ್ ಹೆಚ್ಚಾದಾಗಲೆಲ್ಲಾ ಎರಡು ಪೈಸೆ ಜಾಸ್ತಿಯಾಗುತ್ತಾ ಹೋಗುತ್ತದೆ Like that it will come to Rs. 9.60 ps or so by way of settlement but the Bedi Workers are getting even more than Rs. 9–60 ie., it comes to Rs. 10.

ಶ್ರೀ ಪಂಪಾಪತಿ.—ಕೆಲವು ಇಂಡಸ್ಟ್ರಿಗಳಿಗೆ ದಿನಗೂಲಿಯನ್ನು ಜಾಸ್ತಿ ಕೊಡುವ ಶಕ್ತಿ ಇದೆಯೋ ಅಥವಾ ಇಲ್ಲವೋ ಎಂಬ ಅನುಮಾನವನ್ನು ಮಾನ್ಯ ಮಂತ್ರಿಗಳು ವ್ಯಕ್ತಪಡಿಸಿದರು ಆದರೆ ಈ ಬೀಡಿ ಇಂಡಸ್ಟ್ರಿಗೆ ದಿನಗೂಲಿಯನ್ನು ಹೆಚ್ಚು ಕೊಡುವ ಶಕ್ತಿ ಇದೆ. ಈಗ ಗಣೇಶ ಮತ್ತು ಭಾರತ್ ಬೀಡಿಗಳು ವಿದೇಶಗಳಿಗೆ ರಫ್ತಾಗುತ್ತಿವೆ. ಈ ಬೀಡಿಗಳ ಮಾಲೀಕರು ಕೋಟ್ಯಾಂತರ ರೂ.ಗಳ ಲಾಭ ಮಾಡುತ್ತಿದ್ದಾರೆ. ಆದಕಾರಣ ಇವರು ಕನಿಷ್ಠ ಕೂಲಿ ೯–೪೦ ರೂ.ಗಳನ್ನು ಏತಕ್ಕೆ ಕೊಡಬಾರದು ? ಸಣ್ಣ ಸಣ್ಣ ಕೈಗಾರಿಕೆಗಳವರೇ ಕೊಡುವಾಗ ಇಷ್ಟೊಂದು ಲಾಭ ಮಾಡುತ್ತಿರುವವರು ಏತಕ್ಕೆ ಕೊಡಬಾರದು ? ಮಾನ್ಯ ಮಂತ್ರಿಗಳು ಬೀಡಿ ಇಂಡಸ್ಟ್ರಿ ಬಗ್ಗೆ ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಈಗಲಾದರೂ ಅಲ್ಲಿನ ವಿಷಯಗಳನ್ನು ತಿಳಿದುಕೊಂಡು ಕನಿಷ್ಠ ಕೂಲಿ ೯–೪೦ ರೂ ಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಬಿ. ಜಕನೂರ್.—ಗಣೇಶ ಮತ್ತು ಭಾರತ್ ಈ ಎರಡು ಹೆಸರಿನ ಬೀಡಿ ಮಾಲೀಕರು ಶ್ರೀಮಂತರಿರಬಹುದು. ಅವರು ಲಾಭ ಮಾಡುತ್ತಿರಬಹುದು. ಆದರೆ ಬೇರೆ ಹೆಸರಿನ ಬೀಡಿ ಮಾಲೀಕರನ್ನು ಸಹ ನೋಡಬೇಕಾಗುತ್ತದೆ. ನಾವೇನಾದರು ದಿನಗೂಲಿಯನ್ನು ಹೆಚ್ಚು ಮಾಡಿದರೆ ಈ ಮಾಲೀಕರು ಪಕ್ಕದ ರಾಜ್ಯಗಳಿಗೆ ಹೋಗಬಹುದು. ಆದಕಾರಣ ನಾವು ಕಾರ್ಮಿಕರ ಹಿತವನ್ನು ಸಹ ನೋಡಬೇಕಾಗುತ್ತದೆ.

ಪ್ರಶ್ನೆ : ೮೨೭

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರುವ ಉತ್ತರ ಸರಿಯಿಲ್ಲದಿರುವ ಕಾರಣ ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Irrigation Wells in Dharwad District

978 SRI M. M. MALAGI (Byadagi)—Will the Minister for Co-operation be pleased to state :—

(a) the total number of Wells dug for irrigation purpose with the help of rig machines in Dharwad district ;

(b) out of them, the number of defunct wells (Talukwise figures may be furnished) ;

(c) whether Government has taken any steps for waiving the loan amount of such defunct wells ?

SRI H. C. SRIKANTAIAH (Minister for Co-operation).—

(a) 167.

(b) 31. Talukwise details are as follows :

1.	Dharwad	1
2.	Hubli	1
3.	Haveri	3
4.	Ranebennur	6
5.	Hirekerur	3
6.	Byadagi	5
7.	Gadag	3
8.	Mundargi	2
9.	Ron	2
10.	Akkialur (Hanagal)	5
	Total	31

(c) Yes.

ಶ್ರೀ ಎಂ. ಎಂ. ಮಳಗಿ.—ಇಲ್ಲಿ ನಿರುಪಯುಕ್ತ ಬಾವಿಗಳ ಸಂಖ್ಯೆ ೩೧ ಎಂದು ಹೇಳಿದ್ದಾರೆ. ಆದರೆ ಇವುಗಳ ಸಂಖ್ಯೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿದೆ. ಈ ರೀತಿ ನಿರುಪಯುಕ್ತವಾದಂಥ ಬಾವಿಗಳ ಪೈಕಿ ಎಷ್ಟು ಬಾವಿಗಳಿಗೆ ಸಾಲ ಮಾನ್ಯ ಮಾಡಿದ್ದೀರೆಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ;

ಶ್ರೀ ಎಚ್.ಸಿ. ಶ್ರೀಕಂಠಯ್ಯ.—೩೧ ಬಾವಿಗಳು ನಿರುಪಯುಕ್ತವಾಗಿವೆ. ಇವುಗಳ ಪೈಕಿ ೩ ಬಾವಿಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗಿದೆ.

ಶ್ರೀ ಎಂ.ಎಂ. ಮಳಗಿ.—ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ಬಾವಿಗಳಿಗೆ ಪಂಪ್‌ಸೆಟ್ಟು ಕೊಡುವಾಗ ಆಟ್‌ಲ್ಯಾಂಟಿಕ್ ಎಂಬ ಕಂಪನಿ ಹೆಸರಿನ ಪಂಪ್‌ಸೆಟ್ಟನ್ನು ಮಾತ್ರ ಕೊಡುತ್ತಾರೆ. ಆದರೆ ಇವು ನಿಗದಿತ ಪ್ರಮಾಣದಲ್ಲಿ ನೀರನ್ನು ಮೇಲೆತ್ತುವುದಿಲ್ಲ ಜೊತೆಗೆ ಇದನ್ನು ಪದೇ ಪದೇ ರೀಪೇರಿ ಮಾಡ ಬೇಕಾಗುತ್ತದೆ. ಇದಕ್ಕೆ ಕೆಟ್ಟಾಗ ಕೂಡಲೇ ಮೆಕ್ಯಾನಿಕ್ ಸಿಗುವುದಿಲ್ಲ ಮತ್ತು ಹತ್ತಿರದಲ್ಲಿ ವರ್ಕ್‌ಷಾಪ್ ಕೂಡ ಇಲ್ಲದ ಕಾರಣ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ಕಾರಣದಿಂದ ರೈತರು ಬೇರೆ ಉತ್ತಮವಾದ ಪಂಪ್‌ಸೆಟ್ಟುಗಳನ್ನು ಖರೀದಿ ಮಾಡಲು ಅವಕಾಶ ಮಾಡಿಕೊಡಬೇಕು. ಮತ್ತು ಎಲ್ಲಿ ಪಂಪ್‌ಸೆಟ್ಟು ಖರೀದಿ ಮಾಡಿದರೂ ಬ್ಯಾಂಕ್‌ನವರು ಸಾಲ ಕೊಡುವ ವ್ಯವಸ್ಥೆ ಮಾಡಬೇಕು. ಏಕೆಂದರೆ ಆಟ್‌ಲ್ಯಾಂಟಿಕ್ ಎಂಬ ಹೆಸರಿನ ಪಂಪ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕಲಮಾ ಎಂಬ ಹೆಸರಿನ ಪಂಪ್‌ಗಳು ಸರಿಯಾಗಿ ಕೆಲಸ ಮಾಡುತ್ತವೆ. ಆದಕಾರಣ ಈ ಪಂಪ್‌ಗಳನ್ನಾದರೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಡಿ.ಟಿ. ರಾಮು.—ಭೂಗರ್ಭ ಶಾಸ್ತ್ರಜ್ಞರು ಒಂದು ಸರ್ಟಿಫಿಕೇಟ್ ಕೊಟ್ಟಮೇಲೆ ಕೂಡ ಇವರು ಫೈನಲ್ ಬಿಲ್ ತೆಗೆದುಕೊಂಡರೆಂಬ ಕಾರಣದಿಂದ ನಿರುಪಯುಕ್ತವಾದಂಥ ಬಾವಿಗಳ ಮೇಲಿನ ಸಾಲವನ್ನೂ ಸಹ ಡಿಮ್ಯಾಂಡ್ ಮಾಡುತ್ತಿದ್ದಾರೆ. ಆದಕಾರಣ ಇಂತಹ ಸಂದರ್ಭಗಳಲ್ಲಿ ಕೂಡ ರಿಯಾಯಿತಿ ಕೊಡಲು ಸರ್ಕಾರ ಏನಾದರೂ ಒಂದು ನಿಲುವನ್ನು ತೆಗೆದುಕೊಳ್ಳುತ್ತದೆಯೇ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಭೂಗರ್ಭ ಶಾಸ್ತ್ರಜ್ಞರು ಸರ್ಟಿಫಿಕೇಟ್ ಕೊಟ್ಟಮೇಲೆ ಮತ್ತು ಫೈನಲ್ ಬಿಲ್‌ನ ಹಣ ಪಾವತಿಯಾದ ಮೇಲೆ ಅಕೌಂಟೆಂಟ್ ಜನರಲ್ ಅವರು ಅಬ್ಜಕ್ಷನ್ ರೈಜ್ ಮಾಡಿದ್ದಾರೆ. ಇದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಈ ಒಂದು ಅಬ್ಜಕ್ಷನ್ ಬಾರದಂತೆ ಸಹಾಯ ಮಾಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ.ಎನ್. ರೆಡ್ಡಿ.—ಸ್ವಾಮಿ, ಈ ನಿರುಪಯುಕ್ತ ಬಾವಿಗಳಿಗೆ ಸಾಲ ಮನ್ನಾ ಮಾಡಲು ತಾವು ೩೦-೬-೧೯೮೨ ಕೊನೆಯ ಸಮಯ ಏನು ಗೊತ್ತು ಮಾಡಿದ್ದೀರೋ ಅದನ್ನು ಮುಂದುವರೆಸಲು ಪ್ರಯತ್ನ ಮಾಡುತ್ತೀರಾ? ಕಾರಣ ಅನೇಕ ಆರ್ಜಿಗಳು ಬಿ ಡಿ ಒ. ಮತ್ತು ಅಸಿಸ್ಟೆಂಟ್ ಕಮೀಷನರ್ ಆಫೀಸಿನಲ್ಲಿ ವರ್ಷಾನುಗಟ್ಟಲೆ ಉಳಿದು ಅದು ಇತ್ಯರ್ಥವಾಗಿಲ್ಲವಾದ್ದರಿಂದ ಆ ರಿಯಾಯಿತಿ ಸಿಗುವ ಹಾಗೆ ಪರಿಶೀಲಿಸಲು ಈಗ ತಾವು ಕೊಟ್ಟಿರುವ ದಿನಾಂಕವನ್ನು ಮುಂದುವರೆಸುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ವಿ.ಎಲ್. ಶಿವಪ್ಪ.—ಸ್ವಾಮಿ, ನಿರುಪಯುಕ್ತ ಬಾವಿಗಳು ಎಂದರೆ ಎಷ್ಟು ಗ್ಯಾಲನ್ ಬಂದರೆ ನಿರುಪಯುಕ್ತ ಬಾವಿಗಳಾಗುತ್ತದೆ ಅನ್ನು ವುದನ್ನು ತಿಳಿಸುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಅದು ಸರ್ಕಾರೀ ಆಜ್ಞೆಯಲ್ಲಿ ದೆ. ಬೇಕಾದರೆ ಅದರ ಡೀಟೇಲ್ಸ್ ಕೊಡುತ್ತೇನೆ.

ಶ್ರೀ ವಿ ಎಲ್. ಶಿವಪ್ಪ.—ನನಗೆ ತಿಳಿದಿರುವ ಪ್ರಕಾರ ಹೇಳಬೇಕಾದರೆ ೫೦೦ ಗ್ಯಾಲನ್ ನೀರು ಬಂದರೆ ನಿರುಪಯುಕ್ತ ಬಾವಿ ಎಂದು ಮಾಡಿದ್ದೀರಿ, ಹಾಗೆ ಹೇಳುವುದಕ್ಕೆ ಬರುವುದಿಲ್ಲ. ಕೊನೇಪಕ್ಷ ರೈತನಿಗೆ ೧೦೦೦ ಗ್ಯಾಲನ್ ನೀರು ಬೇಕಾಗುತ್ತದೆ. ೫೦೦ ಗ್ಯಾಲನ್ ನೀರು ಬಂದರೆ ನಿರುಪಯುಕ್ತ ಬಾವಿ ಎಂದು ಹೇಳುವುದರ ಬದಲಾಗಿ ರೈತರ ಹಿತರಕ್ಷಣೆ ಕಾಪಾಡಲು ಅವರಿಗೆ ತೊಂದರೆಯಾಗದೇ ಇರುವ ಹಾಗೆ ಮಾಡಬೇಕಾದರೆ ಕನಿಷ್ಟಪಕ್ಷ ೧೦೦೦ ಗ್ಯಾಲನ್ ಆದರೂ ಬೇಕಾಗುತ್ತದೆ. ಆದುದರಿಂದ ೫೦೦ ಗ್ಯಾಲನ್ ಅನ್ನುವುದರ ಬದಲು ೧೦೦೦ ಗ್ಯಾಲನ್ ಅಂತ ಮಾಡಿದರೆ ಅನುಕೂಲ, ಹಾಗೆ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಾರೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಅದನ್ನೂ ಸಹ ಪರಿಶೀಲಿಸುತ್ತೇನೆ.

ಶ್ರೀ ಕೆ ಹೆಚ್. ಹನುಮೇಗೌಡ.—ಸ್ವಾಮಿ, ಈಗ ತಮ್ಮ ಪ್ರಕಾರ ೫೦೦ ಗ್ಯಾಲನ್ ಬಂದರೆ ನಿರುಪಯುಕ್ತ ಬಾವಿ ಎಂದು ಮಾಡಿದ್ದೀರಿ, ೫೦೧ ಗ್ಯಾಲನ್ ನೀರು ಬಂದರೆ ಅದು ಉತ್ತಮ ಎಂದು ಹೇಳುತ್ತೀರಾ? ತಮಗೆ ಹೇಳಬೇಕಾದರೆ ೫೦೦ ಗ್ಯಾಲನ್ ನೀರು ಬರಬೇಕಾದರೇನೇ ಸುಮಾರು ೧೦೦-೧೫೦-೨೦೦ ಅಡಿ ಆಳ ತೆಗೆಯಬೇಕಾಗುತ್ತದೆ ಅದಕ್ಕಾಗಿ ರೈತರು ೨೦-೨೫ ಸಾವಿರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇಷ್ಟು ದುಡ್ಡು ಖರ್ಚು ಮಾಡಿದರೂ ಸಹ ಒಂದು ಎಕರೆಯೂ ನೀರಾವರಿಯಾಗುವುದಿಲ್ಲ. ಇದು ಅಧಿಕಾರಿ ವರ್ಗದವರು ಏನು ಇದ್ದಾರೋ ಅವರು ಮಾಡಿರತಕ್ಕಂಥಾ ಕೆಲಸದಿಂದ ಈ ರೀತಿ ಆಗಿದೆ. ಹೀಗೆ ಮಾಡುವುದರಿಂದ ಇದು ಪ್ರಾಕ್ಟಿಕಲ್ ಆಗಿ ರೈತರ ಮೇಲೆ ಹೆಚ್ಚಿನ ಪರಿಣಾಮವಾಗಿದೇ ವಿನಾ ಮತ್ತೇನೂ ಇಲ್ಲಾ. ಆದಕ್ಕೋಸ್ಕರ ಮಾನ್ಯ ಶಿವಪ್ಪನವರು ಹೇಳಿದ ಹಾಗೆ ಕೊನೇ ಪಕ್ಷ ೧೮೦೦ ಗ್ಯಾಲನ್ ನೀರು ಮೇಲೆ ಬಂದರೆ ಮಾತ್ರ ಅದು ಸಕ್ಸೆಸ್‌ಫುಲ್ ಬಾವಿ ಎಂದು ಆದೇಶ ಕೊಡುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಈಗ ಇರತಕ್ಕಂಥಾ ಕಾನೂನು ಪ್ರಕಾರ ಬಾವಿಯಲ್ಲಿ ೬೦೦ ಗ್ಯಾಲನ್ ನೀರು ಬಂದರೂ ಅದು ಸಹ ನಿರುಪಯುಕ್ತ ಬಾವಿ ೫೦೦ ಗ್ಯಾಲನ್ ಬಂದರೆ ನಿರುಪಯುಕ್ತ ಬಾವಿಯೇ.

ಶ್ರೀ ವಿ.ಎಲ್. ಶಿವಪ್ಪ.—ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಬಾವಿಗಳಲ್ಲಿ ೬೦೦ ಗ್ಯಾಲನ್ ನೀರು ಬಂದರೂ ಸಹ ರೈತರಿಗೆ ತೊಂದರೆಯಾಗುತ್ತದೆ, ಅವನು ತೆಗೆದುಕೊಂಡಿರತಕ್ಕಂಥಾ ಸಾಲವನ್ನು

ತೀರಿಸಂವುದಕ್ಕಾಗುವುದಿಲ್ಲ ಆದುದರಿಂದ ನಾನು ಮೊದಲೇ ಹೇಳಿದ ಹಾಗೆ ಕೊನೇಪಕ್ಷ ಒಂದು ಸಾವಿರ ಗ್ಯಾಲನ್ ನೀರು ಆದರೂ ಸಹ ರೈತರಿಗೆ ಬೇಕಾಗುತ್ತದೆ, ಆ ರೀತಿ ಮಾಡುತ್ತೀರಾ?

ಶ್ರೀ ಹೆಚ್. ಶ್ರೀಕಂಠಯ್ಯ. ಆ ರೀತಿ ಹೇಳುವುದಾದರೆ ನಾವು ಯಾವುದೇ ಕೆಲಸ ಮಾಡ ಬೇಕಾದರೂ ಅದಕ್ಕೆ ಒಂದು ಮಿತಿ ಇರುವುದಿಲ್ಲ. ಈಗ ಬಾವಿಯಲ್ಲಿ ೬೦೦ ಗ್ಯಾಲನ್ ಎಂದು ಇದೆ, ಅದನ್ನು ೬೦ ಮಾಡಿ ಅಂತ ಕೇಳುತ್ತೀರಾ. ಒಂದು ವೇಳೆ ಅದನ್ನು ೧೦೦೦ ಗ್ಯಾಲನ್ ಅಂತ ಮಾಡಿದರೆ ೧೦೦೧ ಗ್ಯಾಲನ್ ಬಂದರೆ ಅದು ನಿರುಪಯುಕ್ತವಾದ ಬಾವಿ ಅಂತ ಮಾಡಿ ಅಂತ ಕೇಳುತ್ತೀರಾ? ಹೀಗೆ ಮಾಡುತ್ತಾ ಹೋದರೆ ಒಂದು ಮಿತಿ ಇರುವುದಿಲ್ಲ.

ಶ್ರೀ ಕೆ ಹೆಚ್. ಹನುಮೇಗೌಡ.—ಸ್ವಾಮಿ, ರೈತ ೨೦–೨೫ ಸಾವಿರ ರೂಪಾಯಿ ಖರ್ಚು ಮಾಡಿ ಬಾವಿ ತೆಗೆಸಬೇಕಾದರೆ ಅವನಿಗೆ ೪–೫ ಎಕರೆ ಜಮೀನಿನಲ್ಲಿ ಆದರೂ ನೀರಾವರಿ ವ್ಯವಸಾಯ ಮಾಡಿದರೆ ಆತ ತೆಗೆದುಕೊಂಡಿರತಕ್ಕಂಥಾ ಸಾಲವನ್ನು ತೀರಿಸಬಹುದು. ನಿಮ್ಮ ೫೦೦ ಗ್ಯಾಲನ್ ನೀರಿನಲ್ಲಿ ಅರ್ಧ ಎಕರೆ ನೀರಾವರಿಯಾನ್ನೂ ಮಾಡುವುದಕ್ಕಾಗುವುದಿಲ್ಲ. ಅವನಿಗೆ ಸಾಲ ತೀರಿಸಲು ಕಷ್ಟವಾಗುತ್ತದೆ. ಮಾನ್ಯ ಶಿವಪ್ಪನವರು ಹೇಳಿದ ಹಾಗೆ ೧೦೦೦ ಗ್ಯಾಲನ್ ನೀರಾದರೂ ಬೇಕಾಗುತ್ತದೆ. ಆದಕ್ಕೋಸ್ಕರ ಈಗ ೬೦೦ ಗ್ಯಾಲನ್ ಎಂದು ಇರುವ ಬದಲು ೧೦೦೦ ಗ್ಯಾಲನ್ ನೀರು ಬಾವಿಯಲ್ಲಿ ಇದ್ದರೆ ಅದನ್ನು ಸಕ್ಸಸ್‌ಫುಲ್ ಬಾವಿ ಎಂದು ಮಾಡುತ್ತೀರಾ?

ಶ್ರೀ ಹೆಚ್.ಪಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರ ಕಳಕಳಿ ನನಗೆ ಮನವರಿಕೆಯಾಗಿದೆ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎಂ.ಎಂ. ಮಳಗಿ.—ಸ್ವಾಮಿ, ಈ ಪ್ರಶ್ನೆಯಲ್ಲಿ ಫೇಲ್ ಆದಂಥಾ ಬಾವಿಗಳ ಸಂಖ್ಯೆಯನ್ನು ಬಹಳ ಕಡಿಮೆ ಕೊಟ್ಟಿದ್ದೀರಿ. ನನ್ನ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ಜಲತಜ್ಞರು ಓಪನ್ ವೆಲ್ಸ್ ಅನ್ನು ರಾವಂಗುಂಡನಪಳ್ಳಿ ಒಂದರಲ್ಲೆ ತೆಗೆಸಿದರು. ಅದನ್ನು ಯಾರು ಚೆಸ್ಟ್ ಮಾಡುತ್ತಾರೋ ಗೊತ್ತಿಲ್ಲ. ಲಿಂಗಪ್ಪ ಅನ್ನುವವನು ಓಪನ್‌ವೆಲ್ಸ್ ಅನ್ನು ತೆಗೆದಾಗ ಎತ್ತಿನಗಾಡಿ ಮೇಲೆ ಲಾರಿ ಮೇಲೆ ಟ್ಯಾಂಕ್ ಮುಖಾಂತರ ನೀರನ್ನು ಹೊರಗೆ ಸುರಿದರು; ಓಪನ್‌ವೆಲ್ಸ್ ತೆಗೆದಾಯಿತು ಸರಿಯಾಗಿ ನೀರೂ ಬರಲಿಲ್ಲಾ. ಆತನಿಗೆ ಫೈನಲ್ ಬಿಲ್ ಕೊಡಲಿಲ್ಲಾ. ಪಂಪ್‌ಸೆಟ್ಸ್ ಬಾವಿ ತೆಗೆಸಲು ಸಾಲ ಮಾಡಿ ಆ ಸಾಲವನ್ನು ತೀರಿಸದೇ ಕೊನೆಗೆ ಸತ್ತುಹೋದನು. ಆ ಬಾವಿ ಫೈಲ್ಯೂರ್ ಆಯಿತು. ನೀರು ಬರಲಿಲ್ಲ. ಆತ ಜಿಲ್ಲಾಧಿಕಾರಿಯವರಿಗೂ ಮತ್ತು ಬಿ.ಡಿ.ಓ. ಗೂ ಬರೆದುಕೊಂಡರೂ ಕೂಡ ಏನೂ ಕೆಲಸವಾಗಲಿಲ್ಲಾ. ಆತ ಪಂಪ್‌ಸೆಟ್ಸ್ ಬಾವಿ ತೆಗೆಸುವುದಕ್ಕೆ ಸಾಲ ಮಾಡಿ ಅದನ್ನು ತೀರಿಸಲಾರದೆ ಕೊನೆಗೆ ಸತ್ತುಹೋದನು. ಈಗ ಆತನ ಮನೆಯವರು ಆ ಸಾಲವನ್ನು ತೀರಿಸಲಾರದೆ ತುಂಬಾ ಅಪಾಯದ ಸ್ಥಿತಿಯಲ್ಲಿದ್ದಾರೆ, ಇದನ್ನು ಪರಿಶೀಲನೆ ಮಾಡಿ ಅವರಿಗೆ ಏನಾದರೂ ಸಹಾಯ ಮಾಡುತ್ತೀರಾ?

ಎರಡನೆಯದಾಗಿ, ರೈತರು ಬಾವಿಗಳನ್ನು ಪೂರ್ತಾ ತೆಗಿಸಿದ ಮೇಲೆ ಫೈನಲ್ ಆಗಿ ದುಡ್ಡು ಕೊಡುವುದಕ್ಕೆ ಅಲ್ಲಿಯ ಪಿ.ಎಲ್.ಡಿ. ಬ್ಯಾಂಕ್‌ನವರು ಬೆಂಗಳೂರಿಗೆ ಅರ್ಜಿಯನ್ನು ಕಳುಹಿಸಿದರೆ ಇಲ್ಲಿ ಬ್ಯಾಂಕಿನವರು ತಕ್ಷಣವಾಗಿ ಕೊಡುವುದಿಲ್ಲ. ಅವನಿಗೆ ಸಾಲ ಮಂಜೂರಾಗಿದ್ದರೂ ಕೂಡ ಸಕಾಲಕ್ಕೆ ಕೊಡದೆ ಅವರು ಮಾಡಿಕೊಂಡಿರುವ ಸಾಲವನ್ನು ತಕ್ಷಣ ತೀರಿಸಲು ಆಗದೆ ರೈತರು ಬಹಳ ತೊಂದರೆ ಪಡುತ್ತಾರೆ. ಆದುದರಿಂದ ಆ ರೈತರ ಕಷ್ಟವನ್ನು ತಪ್ಪಿಸಲು ದಯವಿಟ್ಟು ನೇರವಾಗಿ ಆ ರೈತನ ಮನೆಗೆ ಚೆಕ್ ತಲುಪುವ ಒಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು. ಯಾವುದಾದರೂ ಒಂದು ನಿರ್ದಿಷ್ಟ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದು, ಇಂಥಾ ತಾಲ್ಲೂಕಿನ ಬ್ಯಾಂಕ್‌ನಲ್ಲಿ ಹೀಗೆ ಆಗಿದೆ, ಇಂಥಾ ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಈ ರೀತಿ ಆಗಿದೆ, ಅನ್ನುವುದನ್ನು ಸರ್ಕಾರದ ಗಮನಕ್ಕೆ ತಂದರೆ ಸಂಬಂಧ ಪಟ್ಟವರನ್ನು ಕರೆಸಿಮಾತನಾಡಿ ಅವರಿಗೆ ಸುಲಭವಾಗಿ ಹಣ ದೊರೆಯುವಂತೆ ಮಾಡಿಸುತ್ತೇನೆ.

ಶ್ರೀ ಎಂ.ಎಂ. ಮಳಗಿ.—ಈಗ ರೈತರು ಬೆಂಗಳೂರಿಗೆ ಬಂದು ತಮ್ಮ ಹಣವನ್ನು ಸ್ಯಾಂಕ್ಷನ್ ಮಾಡಿಸಿಕೊಳ್ಳುವುದಕ್ಕೆ, ತುಂಬಾ ಪ್ರಯತ್ನ ಮಾಡುತ್ತಾರೆ. ಆದರೂ ತಕ್ಷಣವೇ ಹಣ ದೊರೆಯುವುದಿಲ್ಲ. ಆ ರೈತರು ಬಾವಿ ತೆಗೆಸಿದ ಮೇಲೆ ಫೈನಲ್ ಬಿಲ್ ಅನ್ನು ತಕ್ಷಣವೇ ಅವರಿಗೆ ದೊರೆಯುವಂತೆ ಒಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ನಾನು ಆಗಲೇ ಹೇಳಿದನೆಲ್ಲಾ, ಪರಿಶೀಲನೆ ಮಾಡುತ್ತೇನೆಂದು.

ಶ್ರೀ ಚೌಡಯ್ಯ.— ಸ್ವಾಮಿ, ಕೆಲವು ಕಡೆಗಳಲ್ಲಿ ಬಾವಿ ತೆಗೆಸಿದರೆ ಅಲ್ಲಿ ಉಪ್ಪು ನೀರು ಬಂದು, ಆ ಭೂಮಿಯೂ ಕೂಡ ಚೌಳು ಭೂಮಿ ಆಗಿರುತ್ತದೆ. ಆದ್ದರಿಂದ ಆ ರೈತ ಅಲ್ಲಿ ಏನೂ ಬೆಳೆ ಮಾಡುವುದಕ್ಕಾಗುವುದಿಲ್ಲ. ಇದರಿಂದ ಆ ರೈತರು ಬಹಳ ಸಪ್ಪ ಹೊಂದಿರುತ್ತಾರೆ, ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರ ಯಾವ ರೀತಿಯ ಪರಿಶೀಲನೆ ಮಾಡುತ್ತದೆ ಅನ್ನುವುದನ್ನು ಹೇಳುತ್ತೀರಾ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಯಾವುದಾದರೂ ಒಂದು ನಿರ್ದಿಷ್ಟ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಪರಿಶೀಲಿಸುತ್ತೇನೆ. ಆ ಪ್ರಕರಣವನ್ನು ತಜ್ಞರ ಪರಿಶೀಲನೆಗೆ ಕಳುಹಿಸಿ ಏನಾದರೂ ರಿಯಾಯಿತಿ ಬಂದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Credit facilities to the ryots

1001 SRI M H. BEKINALKAR (Sindgi).—Will the Minister for Co-operation be pleased to state.—

(a) the number and names of societies in Sindgi taluk which have defaulted.

(b) the steps taken by Government to improve these societies.

(c) whether any alternative credit facilities have been provided to the ryots ?

SRI H.C. SRIKANTAIAH (Minister for Co-operation).—

(a) 47. Names of societies are indicated in Annexure I. is Appended.

(b) The recovery programme has been streamlined and societies have been directed to cover all the overdue loans under legal action.

(c) Yes.

ANNEXURE

List of Agricultural Societies defaulted to District Central Co-operative Bank Ltd., Bijapur.

1 Byakod Gram Seva Sahakari Sangh Ltd..
2 Chiksindgi Vyavasaya Seva Sahakari Sangh Ltd.,
3 Ganihar Gram Seva Sahakari Sangh Ltd.,
4 Golageri do
5 Kannolli Vyavasaya Seva Sahakari Sangh Ltd.,
6 Madhal Gram Seva Sahakari Sangh Ltd.,
7 Yaragal do